ಕಥೆ

# ಮಾಯ್ಕಾರ ಕಿಟಕಿ



ಪೂರ್ಣಿಮಾ ಭಟ್ಟ ಸಣ್ಣಕೇರಿ
ಕಲೆ: ಸಂತೋಷ್ ಸಸಿಹಿತ್ಲು

'ಅನ್ಯಮನಸ್ಕತೆಯೂ ಒನ್ನಮೂನೆ ಅಮಲು ಅಲಾ!' ಎಂದು ಅಚ್ಚಕನ್ನಡದಲ್ಲಿ ಜೋರಾಗಿಯೇ ಹೇಳಿ ಒಮ್ಮೆ ಮೈಮುರಿದಳು ಜ್ಯೋತ್ಸ್ನಾ. ಜ್ಯೋತ್ಸ್ನಾ 'ಜೋ' ಆಗಿ ಬದಲಾಗಿ ಸುಮಾರು ವರ್ಷಗಳೇ ಕಳೆದಿವೆ. ಅವಳು ಕೂತು ಬಿಸಿ ಮಾಡಿದ್ದ ಜಾಗವನ್ನು ಬಿಟ್ಟು ಮತ್ತೆಲ್ಲ ಕಡೆಯೂ ಪ್ಯಾಟಿಯೋ ತಣ್ಣಗೆ ಕೊರೆಯುತ್ತಿದೆ. ಗಾರ್ಡನ್ನಿನ ಶೆಡ್ ಮೇಲೆ ಹಿಮದಂಥದ್ದೇ ತೆಳ್ಳನೆಯ ಪರದೆ. ಅವಳಿಗೆ ಮೈಮೇಲೆ ಜಂಪರೊಂದು ಬೇಕೆನಿಸುತ್ತಿದೆ.

ಜ್ಯೋತ್ಸ್ನಾ ಮತ್ತೆ ಮದುವೆ ಹಾಡಿನ ಗುಂಗಿನಲ್ಲಿ ಮಗ್ನಳು.

ನಿನ್ನ ಮೊರೆ ಹೊಕ್ಕ ಜನರ ಮನ್ನಿಸಿ ಪಾಲನೆ ಮಾಡು।
ಅನ್ಯಾಯ ಮಾರ್ಗವ ಬಿಡು ಧರ್ಮದಲ್ಲಿ ಮನಸಿಡು।
ಸಂಪನ್ನs ರಾಜ್ಯವನಾಳು॥

ಇವತ್ತು ಬೆಳಗೆದ್ದಾಗಿನಿಂದ ಇದೇ ಕಥೆ ಅವಳದ್ದು. ಒಂದರನಂತರ ಇನ್ನೊಂದು ಹಾಡಿನ ಸೊಲ್ಲುಗಳು ತಲೆಯಲ್ಲಿ ಗುಂಯೆನ್ನುತ್ತಿವೆ. ಅಲೆದಾಡುವ ಮನಸ್ಸು. ಕೆಲವೊಮ್ಮೆ ಅನ್ಯಮನಸ್ಕತೆಯೂ ಒಂದು ನಮೂನೆಯ ಅಮಲು ಅಂದುಕೊಂಡಳು ಮತ್ತೊಮ್ಮೆ.

ಮೂರುದಿನದ ಹಿಂದೆ ಊರಲ್ಲಿ ಜ್ಯೋತ್ಸ್ನಾಳ ಚಿಕ್ಕಪ್ಪನ ಮಗಳ ಮದುವೆ ಧಾಂಧೂಂ ಆಗಿ ನಡೆಯಿತಂತೆ. ಸಾವಿರಾರು ಮೈಲಿ ದೂರದಲ್ಲಿ ಕೂತು ಫೋಟೊಗಳನ್ನು ನೋಡಿದಳು. ಆಗಿನಿಂದಲೇ ಅಮರಿಕೊಂಡಿದ್ದು ಈ ಜಾಡ್ಯ. ಮದುವೆಯಲ್ಲಿ ಅವಳೇ ಕಲಶಗಿತ್ತಿಯಾಗಬೇಕಿತ್ತು. ಆಫೀಸಿನಲ್ಲಿ ಕಳ್ಳನೆಪವೊಂದು ಹೇಳಿ ಆ ದಿನ ರಜೆ ಹಾಕಿ ಕೂತಿದ್ದಳು. ಮನೆಯೆದುರಿನ ಹೆಜ್ ಟ್ರಿಮ್ ಮಾಡುತ್ತ ಬೆಳಗ್ಗೆ ಕಳೆದಳು, ಮಧ್ಯಾಹ್ನದ ನಂತರ ಅಡುಗೆಮನೆಯ ನೆಲವನ್ನು ತಿಕ್ಕಿ ತೊಳೆದಳು, ಸಂಜೆ ಒಂತಾಸು ಬಾತ್‌ಟಬ್‌ನಲ್ಲಿ ಮುಳುಗೆದ್ದಳು. ಎಲ್ಲವೂ ಒಂದಕ್ಕೊಂದು ತತ್ಸಂಬಂಧವಿಲ್ಲದ್ದು.

ಇವತ್ತು ಶನಿವಾರ, ರಜೆ. ಅವಳು ಎದ್ದಾಗಲೇ ಗಡಿಯಾರ ಒಂಬತ್ತು ತೋರಿಸುತ್ತಿತ್ತು. ಬ್ಯಾಕ್ ಗಾರ್ಡನ್ನಿನ ಪ್ಯಾಟಿಯೋದ ಬೆಂಚಿನ ಮೇಲೆ ಕೂತಿದ್ದು ಮಾತ್ರ ಗೊತ್ತು. ಇಂಗ್ಲೆಂಡಿನ ಷೆಪರ್‌ಟನ್ ವಿಲೇಜಿನಿಂದ ಇನ್ನೆಲ್ಲೋ ಓಡಿದ ಅವಳ ಮನಸು.

'ಜೋಹ್, ಬೆಂಚಿನ ಮೇಲೆ ಟೀ ಇಟ್ಟಿದ್ದೆ. ಪೂರ್ತಿ ಆರಿಹೋಯಿತು. ವೈ ಆರ್ ಯೂ ಸೋ ಅನ್‌ಅಲೈನ್ಡ್ ಟುಡೇ?' ಎನ್ನುತ್ತ ನೀಲ್ ಪ್ಯಾಟಿಯೋದಲ್ಲಿ ನಿಂತ. 'ಜೋ'ಕ್ಕೊಂದು ಹ ಸೇರಿಸಿ ಜ್ಯೋತ್ಸ್ನಾಳ ಹೆಸರನ್ನು ಇಂಡಿಯನೈಸ್ ಮಾಡುವ ಪ್ರಯತ್ನ ಅವನದು. ಅವನತ್ತ ಹೊರಳಿದಳು. 'ಹೇಗಿದ್ದೀಯಾ?' ಸಹಜ ಕಾಳಜಿ ತೋರಿದ ನೀಲ್. 'ಐ ಹ್ಯಾವ್ ಹ್ಯಾಡ್ ಬೆಟರ್ ಡೇಯ್ಸ್' ಎಂದು ಅನಾಯಾಸವಾಗಿ ಕೊಂಕು ಮಾತಾಡಿದಳು. ನಂತರ ಕಣ್ಣಲ್ಲಿ ಪಶ್ಚಾತ್ತಾಪ ಇಣುಕಿಸಲು ಪ್ರಯತ್ನಪಟ್ಟಳು. ಆ ಕೊಂಕು ನೀಲ್‌ನನ್ನು